ತಾಲ್ಲೂಕು		ಮನೆ ಸಂಖ್ಯೆ
ಬಿಜಾಪುರ	...	833
ಮುದ್ದೇಬಿಹಾಳ	...	94
ಇಂಡಿ	...	695
ಬಸವನಬಾಗೇವಾಡಿ	...	295
ಸಿಂಧಗಿ	...	281
	ಒಟ್ಟು	2198

ಆಲಮಟ್ಟಿ ನಾರಾಯಣಪುರ ರಸ್ತೆ

227 (287) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) – ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಆಲಮಟ್ಟಿ–ನಾರಾಯಣಪುರ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಈ ಕಾಮಗಾರಿಗೆ ಸರ್ಕಾರದಿಂದ ಎಷ್ಟು ಹಣ ಮೀಸಲಿರಿಸಲಾಗಿದೆ;

ಇ) ಮೀಸಲಿರಿಸಿದ್ದಲ್ಲಿ, ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ಬಂದಿದೆ

ಆ) ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸುವ ಉದ್ದೇಶವಿದ್ದುದರಿಂದ ಯಾವುದೇ ಹಣ ಮೀಸಲಿಟ್ಟಿರುವುದಿಲ್ಲ.

ಇ) ನಿಗಮದಡಿಯಲ್ಲಿ ಹಣವನ್ನು ಒದಗಿಸಿಕೊಂಡು ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಜಮೀನುಗಳ ಭೂ ಪರಿವರ್ತನೆ